
ಪ್ರಬಂಧ





**ಪದ್ಮಿನಿ ನಾಗರಾಜು**

ಕಲೆ: ಗುಜ್ಜಾರ್

# ಛತ್ರಿ ಮಹಾತ್ಮೆ

ಬೆಂಗಳೂರಿನ ಕತ್ತರಿಗುಪ್ಪೆಯ ಮನೆಯಲ್ಲಿ ಕುಳಿತು ಈ ಜಡಿ ಮಳೆಯನ್ನು ನೋಡಿದಾಗಲೆಲ್ಲ ನನಗೆ ಚಿಕ್ಕಮಗಳೂರಿನ ಮಳೆಯೇ ಜ್ಞಾಪಕಕ್ಕೆ ಬರುತ್ತದೆ. ಹೌದು ನನಗೂ ಮಳೆಗೂ ಒಂದು ರೀತಿಯ ನಂಟು. ನಾನು 12 ವರುಷ ಬಿರು ಬೇಸಿಗೆಯ ಊರಾದ ಗಂಗಾವತಿಯಲ್ಲಿ ನೆಲೆ ನಿಂತಿದ್ದೆ. ಅಪ್ಪ ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯಲ್ಲಿ ಪಶುವೈದ್ಯರಾಗಿದ್ದರಿಂದ ಅವರಿಗೆ ಒಂದಿಲ್ಲೊಂದು ಊರಿಗೆ ಪಯಣ ಬೆಳೆಸಬೇಕಾಗಿತ್ತು. ಸರ್ಕಾರದ ಆದೇಶವನ್ನು ಉಲ್ಲಂಘಿಸುವಂತೆ ಇರಲಿಲ್ಲ. ಹಾಗಾಗಿ ನಾನು ಕೂಡ ಅಪ್ಪನೊಂದಿಗೆ ಅವರ ಕೈ ಹಿಡಿದು ಒಂದಿಲ್ಲೊಂದು ಊರಿಗೆ ಪಯಣ ಬೆಳೆಸುತ್ತಿದ್ದೆ. ಅದೊಂದು ಅದ್ಭುತವಾದಂತಹ ಅನುಭವ. ಮನೆಯ ಸಾಮಾನುಗಳನ್ನು ಗಂಟು ಮೂಟೆ ಕಟ್ಟಿ ಅದೆಲ್ಲವನ್ನು ಲಾರಿಗೆ ಸಾಗಿಸಿ, ನಮ್ಮನ್ನೆಲ್ಲಾ ತಮ್ಮ ಸರ್ಕಾರಿ ಜೀಪಿನಲ್ಲಿ ಇನ್ನೊಂದು ಊರಿಗೆ ತಲುಪಿಸುತ್ತಿದ್ದ ಅಪ್ಪ.

ನಿಜ. ಹಾಗೆ ಸಾಮಾನುಗಳ ಜೊತೆ ಬಂದ ನಮ್ಮನ್ನು ಸಂಭಾಳಿಸುವುದರೊಂದಿಗೆ, ಅಮ್ಮ ತನ್ನ ಸಾಮಾನುಗಳನ್ನು ಮತ್ತೆ ಹೊಸ ಮನೆಯಲ್ಲಿ ಒಪ್ಪವಾಗಿ ತಿಂಗಳುಗಟ್ಟಲೆ ಜೋಡಿಸಿಕೊಳ್ಳುತ್ತಿದ್ದಳು. ಹೀಗೆ ಮನೆಯಿಂದ ಮನೆಗೆ ದಾಟಿ ಬಂದಿದ್ದ ನಾವು ಗಂಗಾವತಿಯಲ್ಲಿ ನೆಲೆ ನಿಂತೆವು. ಮಳವಳ್ಳಿ ಬಿಟ್ಟು ಹೋಗುವಾಗಲೇ ಅನೇಕ ಜನ ನಮ್ಮಪ್ಪ ಅಮ್ಮನಿಗೆ ಹೆದರಿಸಿದ್ದರು. ಆ ಊರಲ್ಲಿ ಬಿಸಿಲೆಂದರೆ ಬಿಸಿಲು. ಅಲ್ಲಿರುವುದು ಒಂದೇ ಕಾಲ ಅದು ಬೇಸಿಗೆ... ಬೇಸಿಗೆ... ಬಿರುಬೇಸಿಗೆ ಎಂದು. ಹೌದು. ಅದು ನಿಜವು ಕೂಡ. ಏಕೆಂದರೆ ನಾವು ಬೇಸಿಗೆಯನ್ನು ಅನುಭವಿಸಿ, ಬಿರು ಬೇಸಿಗೆಯನ್ನೂ ಅನುಭವಿಸಿದೆವು. ಮನೆಯ ಸುತ್ತ ಹತ್ತಾರು ಮರಗಳಿದ್ದರೂ ಅವು ಪ್ಲಾಸ್ಟಿಕಿನ ಮರಗಳಂತೆ ಒಂದೂ ಚೂರು ಅಲ್ಲಾಡದೆ ಇರುತ್ತಿದ್ದವು. ಜನರೆಲ್ಲಾ ಮನೆಯ ಹೊರಗೆ ಮಲಗುತ್ತಿದ್ದರು. ಹೆಂಗಸರು ಮನೆಯ ಛಾವಣಿಯ ಮೇಲೆ ಮೊದಲೇ